# 50ರ ಹುಡುಗ!



26 ವರ್ಷಗಳ ಹಿಂದೆ ಕಿರುತೆರೆಯಲ್ಲಿ ಬರುತ್ತಿದ್ದ 'ಫೌಜಿ' ಎಂಬ ಸೀರಿಯಲ್ ನೆನಪಿಸಿಕೊಳ್ಳುವವರು ಈಗಲೂ ಇದ್ದಾರೆ. ಆ ಸೀರಿಯಲ್‌ನಲ್ಲಿ ಮುಖ್ಯ ಪಾತ್ರದಲ್ಲಿ ನಟಿಸುತ್ತಿದ್ದ ಶಾರೂಕ್ ಖಾನ್, ಮುಂದೊಂದು ದಿನ ಇಡೀ ಹಿಂದಿ ಸಿನಿಮಾ ಸಾಮ್ರಾಜ್ಯವನ್ನು ಆಳುವ 'ಕಿಂಗ್ ಖಾನ್' ಆಗುತ್ತಾನೆಂದು ಯಾರೂ ಭಾವಿಸಿರಲು ಸಾಧ್ಯವಿಲ್ಲ. ಆದರೆ ಅದಾಗ ತಾನೇ ಮಹಾನಗರಗಳ ಮನೆಮನೆಯನ್ನು ತಲುಪಿದ್ದ ಟೀವಿ ಸೆಟ್ ಮುಂದೆ ಕುಳಿತ ಜನರು, ಈತನ ಚುರುಕು ಕಂಗಳು ಮತ್ತು ವಿಶಿಷ್ಟ ನಗೆಯನ್ನು ವಿಶೇಷವಾಗಿ ಗಮನಿಸಿದ್ದಂತೂ ನಿಜ. ಆ ಬಳಿಕ ಬಂದ 'ದಿಲ್ ದರಿಯಾ' 'ಈಡಿಯಟ್' ಮತ್ತು 'ಸರ್ಕಸ್' ಟೀವಿ ಸೀರಿಯಲ್‌ಗಳೂ ಈತನಿಗೆ ಸಾಕಷ್ಟು ಹೆಸರು ತಂದುಕೊಟ್ಟವು. ಈತನ ನಟನೆಯನ್ನು ಮೆಚ್ಚಿದ ಕೆಲವರು 'ಈ ಹುಡುಗ ದಿಲೀಪ್ ಕುಮಾರ್ ತರಹ ಅಭಿನಯಿಸುತ್ತಾನೆ' ಎಂದು ಹೊಗಳಿದ್ದೂ ಉಂಟು.

ಶಾರೂಕ್ ಹುಟ್ಟಿದ್ದು (2/11/1965) ದೆಹಲಿಯಲ್ಲಿ. 60ರ ದಶಕದ ಕೊನೆಯಲ್ಲಿ ಐದು ವರ್ಷಗಳ ಕಾಲ ಮಂಗಳೂರಿನಲ್ಲಿ ಬೆಳೆದ ಈ ಪೋರ, ಆಗ ಇದ್ದದ್ದು ಅಜ್ಜ (ತಂದೆಯ ತಂದೆ) ಇಫ್ತಿಕಾರ್ ಅಹ್ಮದ್ ಅವರ ಮನೆಯಲ್ಲಿ. ಅವರು ನವಮಂಗಳೂರು ಬಂದರಿನಲ್ಲಿ ಚೀಫ್ ಎಂಜಿನಿಯರ್ ಆಗಿದ್ದವರು. ಮತ್ತೆ ಆ ಕುಟುಂಬ ದೆಹಲಿಗೆ ತೆರಳಿತು. ಶಾರೂಕ್‌ನ ಅಪ್ಪ ಮೀರ್ ತಾಜ್ ಮೊಹಮ್ಮದ್ ಖಾನ್ ಪೇಶಾವರದಲ್ಲಿ (ಆಗ ಅದು ಅಖಂಡ ಭಾರತಕ್ಕೆ ಸೇರಿತ್ತು) ಗಡಿನಾಡ ಗಾಂಧಿ ಗಫಾರ್ ಖಾನ್ ಬೆಂಬಲಕ್ಕೆ ಟೊಂಕ ಕಟ್ಟಿ ನಿಂತಿದ್ದರು. ರಾಷ್ಟ್ರೀಯ ಕಾಂಗ್ರೆಸ್‌ನ ಕಟ್ಟಾಳುವಾಗಿ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ದೇಶವಿಭಜನೆಯ ಬಳಿಕ 1948ರಲ್ಲಿ ಕುಟುಂಬ ದೆಹಲಿಗೆ ಸ್ಥಳಾಂತರಗೊಂಡಿತು. ಅಪ್ಪ ಮೀರ್ ದೆಹಲಿಯಲ್ಲಿ ಹೋಟೆಲ್ ನಡೆಸತೊಡಗಿದ.

ದೆಹಲಿಯಲ್ಲಿ ವಿದ್ಯಾಭ್ಯಾಸ ಪಡೆದ ಶಾರೂಕ್ ಹದಿಹರೆಯದ ದಿನಗಳಲ್ಲಿ ಕಾಲೇಜಿಗಿಂತ ಹೆಚ್ಚು ಸಮಯ ಕಳೆದದ್ದು ರಂಗಭೂಮಿಯಲ್ಲಿ. ಥಿಯೇಟರ್ ಆ್ಯಕ್ಷನ್ ಗ್ರೂಪ್ (ಟ್ಯಾಗ್)ನಲ್ಲಿ ಸಕ್ರಿಯನಾಗಿದ್ದ ತರುಣ ಶಾರೂಕ್, ಮಾಸ್ ಕಮ್ಯುನಿಕೇಶನ್ ಎಂ.ಎ ಯನ್ನು ಅರ್ಧಕ್ಕೆ ಕೈಬಿಡಲೂ ರಂಗಭೂಮಿಯೇ ಕಾರಣ. 81ರಲ್ಲಿ ಕ್ಯಾನ್ಸರ್‌ನಿಂದ ಅಪ್ಪ ಸತ್ತಾಗ ಕುಟುಂಬದ ಹೊಣೆಗಾರಿಕೆ. ಆದರೆ 91ರಲ್ಲಿ ಅಮ್ಮ ಸತ್ತಾಗ ಇಡೀ ಕುಟುಂಬವೇ ತತ್ತರಿಸಿತು. ಈತನ ಅಕ್ಕ ಮನೋರೋಗಿಯಾದಳು. ಅಕ್ಕನ ಜತೆಗೆ ದೆಹಲಿಯಿಂದ ಮುಂಬೈಗೆ ವಲಸೆ ಹೋಗಲು ನಿರ್ಧರಿಸಿದ ಶಾರೂಕ್‌ಗೆ, ಎಲ್ಲವನ್ನೂ ಮರೆಯಲು ಸಿನಿಮಾವೇ ದಾರಿ ಎಂದೆನ್ನಿಸಿತ್ತು.

ಮುಂಬೈ ಶಾರೂಕ್‌ನನ್ನು ತೋಳ್ತೆರೆದು ತಬ್ಬಿಕೊಂಡದ್ದು ಸುಳ್ಳಲ್ಲ. ಆರಂಭದಲ್ಲಿ ಏಕಕಾಲಕ್ಕೆ 4 ಸಿನಿಮಾಗಳಲ್ಲಿ ನಟಿಸುವ ಅವಕಾಶ ಸಿಕ್ಕಿತು. ಅದರಲ್ಲಿ ಒಂದು ಹೇಮಮಾಲಿನಿ ಚೊಚ್ಚಲ ನಿರ್ದೇಶನದ ಚಿತ್ರ– ದಿಲ್ ಆಶ್ನಾ ಹೈ. ಇನ್ನೆರಡು ಚಮತ್ಕಾರ್ ಮತ್ತು ರಾಜು ಬನ್‌ಗಯಾ ಜಂಟಲ್‌ಮ್ಯಾನ್. ಹೆಚ್ಚು ಹಣ ಬರದಿದ್ದರೂ, ಹೆಸರು ಬಂತು. ಆದರೆ 92ರಲ್ಲಿ ಬಂದ 'ದೀವಾನಾ' ಎನ್ನುವ ಚಿತ್ರದ ಖಳಛಾಯೆಯ ಪಾತ್ರ ಶಾರೂಕ್‌ನನ್ನು ತಾರಾಪಟ್ಟಕ್ಕೆ ಎತ್ತರಿಸಿತು. ನಟನೆಯಲ್ಲಿ ಅನುಭವಿ ರಿಶಿಕಪೂರ್‌ನನ್ನೂ ಹಿಂದಿಕ್ಕಿದ ಶಾರೂಕ್ ಭೇಷ್ ಎನ್ನಿಸಿಕೊಂಡ. ಬೆನ್ನಲ್ಲೆ ಬಂದ 'ಢರ್' ಪ್ರತಿನಾಯಕನ ಇಮೇಜ್ ಸೃಷ್ಟಿಸಿ ಶಾರೂಕ್‌ನ ನಾಗಾಲೋಟಕ್ಕೆ ಸಹಿ ಹಾಕಿತು. ಅಲ್ಲಿಂದೀಚೆಗಿನದ್ದು ಇತಿಹಾಸ.

ಈಗ ಶಾರೂಕ್ 80 ಚಿತ್ರಗಳ ಸರದಾರ. ಬಾಲಿವುಡ್ ಬಾದ್‌ಶಾ, ಕಿಂಗ್ ಖಾನ್ ಮುಂತಾದ ಬಿರುದಾಂಕಿತ. ಆತನ ಪ್ರತಿ ಸಿನಿಮಾ ಕೂಡಾ ಕೋಟ್ಯಂತರ ರೂಪಾಯಿ ದುಡಿಯುತ್ತದೆ. ಈತನ ಯಶಸ್ಸಿನಲ್ಲಿ ಸಾವಿರಾರು ಜನ ಅನ್ನ ಕಂಡುಕೊಂಡಿದ್ದಾರೆ. ಬಾಲಿವುಡ್‌ನಲ್ಲಿ ಇನ್ನಿಬ್ಬರು ಖಾನ್‌ಗಳು ಈತನಿಗಿಂತ ಹೆಚ್ಚು ಸುದ್ದಿ ಮಾಡಿದರೂ, ದುಡಿಮೆಯ ವಿಷಯದಲ್ಲಿ ಶಾರೂಕ್ ಅವರಿಗಿಂತ ದೈತ್ಯ. ವರ್ಷಕ್ಕೆ 2–3 ಸಿನಿಮಾ, ಪ್ರತಿತಿಂಗಳೂ ಹೊಸ ಜಾಹೀರಾತುಗಳು, ಬ್ರ್ಯಾಂಡ್ ಪ್ರಚಾರಗಳು ಜತೆಗೆ ವಿಶ್ವಾದ್ಯಂತ ಸ್ಟೇಜ್ ಷೋಗಳು. ಒಂದು ಸಮೀಕ್ಷೆಯ ಪ್ರಕಾರ, ಶಾರೂಕ್ ವಿಶ್ವದಲ್ಲೇ ಅತ್ಯಂತ ಹೆಚ್ಚು ಜನಪ್ರಿಯ ಚಿತ್ರನಟ. ಜಗತ್ತಿನಲ್ಲಿ ಶಾರೂಕ್‌ನ ಹೆಸರು ಗೊತ್ತಿರುವ 3.2 ಶತಕೋಟಿ ಜನರಿದ್ದಾರಂತೆ. ಜನಪ್ರಿಯತೆಯಲ್ಲಿ ಎರಡನೇ ಸ್ಥಾನದಲ್ಲಿ ಇರುವಾತ ಹಾಲಿವುಡ್ ನಟ ಟಾಮ್ ಕ್ರೂಸ್. ಆತನ ಹೆಸರು ಗೊತ್ತಿರುವವರು 2.7 ಶತಕೋಟಿ!

ಜನಪ್ರಿಯತೆಯ ಜತೆಗೆ ಸಿನಿಮಾ ಶಾರೂಕ್‌ಗೆ ಅಪಾರ ಹಣವನ್ನೂ ತಂದುಕೊಟ್ಟಿದೆ. ಬಲ್ಲ ಮೂಲಗಳ ಪ್ರಕಾರ ಶಾರೂಕ್‌ನ ಒಟ್ಟು ಆಸ್ತಿ ಮೊತ್ತ 400ರಿಂದ 600 ದಶಲಕ್ಷ ಅಮೆರಿಕನ್ ಡಾಲರ್.

ಮೊನ್ನೆ ನಮ್ಮ ರಾಜ್ಯೋತ್ಸವದ ಮರುದಿನದಂದು (ನ.2) ಶಾರೂಕ್‌ಗೆ 50 ತುಂಬಿತು. ಈ ಇಳಿವಯಸ್ಸಿನಲ್ಲೂ 25ರ ಹುಡುಗನ ಪಾತ್ರದಲ್ಲಿ ಮಿಂಚುತ್ತಿರುವ ಶಾರೂಕ್‌ಗೆ ಮೂವರು ಮಕ್ಕಳು. ಮೂರನೆಯ ಮಗ ಬಾಡಿಗೆ ತಾಯ್ತನದ ಕೊಡುಗೆ. 'ನನ್ನ ಧರ್ಮ ಇಸ್ಲಾಂ. ನನ್ನ ಪತ್ನಿ ಗೌರಿ ಹಿಂದೂ. ಮಕ್ಕಳು ಕ್ರಿಶ್ಚಿಯನ್ ಆದರೂ ಆಗಬಹುದು' ಎಂದು ನಗುವ ಶಾರೂಕ್‌ನನ್ನು ಕೆಲವರು 'ಪಾಕಿಸ್ತಾನದ ಬಡಿಗೆ' ಹಿಡಿದುಕೊಂಡು ಕುಟ್ಟುತ್ತಿರುವುದು ತಮಾಷೆಯಾಗಿದೆ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65